ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲದ ಪ್ರಶ್ನೆ ಸಂಖ್ಯೆ | : | 870 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16.12.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಪಡಿತರ ಚೀಟಿಗಳನ್ನು ಬಿಪಿಎಲ್‌ನಿಂದ ಎಪಿಎಲ್‌ಗೆ ಬದಲಾಯಿಸುವಾಗ ಸರಕಾರಿ ನೌಕರರು, ಆದಾಯ ತೆರಿಗೆ/ಜಿಎಸ್‌ಟಿ ತೆರಿಗೆ ಪಾವತಿದಾರರು, ಸಾಲಕ್ಕಾಗಿ ಆದಾಯ ತೆರಿಗೆ ರಿಟನ್ಸ್ ಸಲಿಸಿದವರು, ಆಧಾರ್- ಪಾನ್ ಲಿಂಕ್ ಗೆ ದಂಡ ಪಾವತಿಸಿದವರು ಮತ್ತು ಹೆಚ್ಚು ಆದಾಯ ಹೊಂದಿದವರನ್ನು ಗುರುತಿಸುವಾಗ ನೈಜ ಬಿಪಿಎಲ್ ಪಡಿತರ ಚೀಟಿದಾರಿಗೆ ತೊಂದರೆಯಾಗದಂತೆ ಇರಲು ಅನುಸರಿಸಿದ ಕಾರ್ಯ ವಿಧಾನವೇನು; | ಸರ್ಕಾರದ ಮಾನದಂಡಗಳ ವಿರುದ್ಧವಾಗಿ ಪಡಿತರ ಚೀಟಿ ಪಡೆದವರ ಮಾಹಿತಿಯನ್ನು 'ಕುಟುಂಬ' ತಂತ್ರಾಂಶದಿಂದ ಪಡೆದಿದ್ದು, ಆದಾಯ ತೆರಿಗೆ ಪಾವತಿದಾರರು, ವಾರ್ಷಿಕ ರೂ.1.20 ಲಕ್ಷಕ್ಕಿಂತ ಹೆಚ್ಚಿರುವ ಫಲಾನುಭವಿಗಳು, ಸರ್ಕಾರಿ ನೌಕರರು ಮೃತ ಫಲಾನುಭವಿಗಳು ಮತ್ತು 06 ತಿಂಗಳಿನಿಂದ ಆದ್ಯತಾ ಪಡಿತರ ಪಡಿತರವನ್ನು ಪಡೆಯದೇ ಇರುವ ಚೀಟಿದಾರರ ಮಾಹಿತಿಯನ್ನು ಪಡೆಯಲಾಗಿರುತ್ತದೆ.<br><br>ದಿನಾಂಕ:22.11.2024ರ ಪತ್ರದನಯ ಸರ್ಕಾರಿ ನೌಕರರು ಹಾಗೂ ಆದಾಯ ತೆರಿಗೆ ಪಾವತಿದಾರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರು ಸ್ಥಾಪಿಸಲಾಗಿರುತ್ತದೆ.<br><br>ಆದಾಗ್ಯೂ ಸದರಿ ಪಡಿತರ ಚೀಟಿದಾರರ ಮಾಹಿತಿಯನ್ನು ಪುನ: ಜಿಲ್ಲಾ/ ತಾಲೂಕು ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅರ್ಹ ಪಡಿತರ ಚೀಟಿಯನ್ನು ಪುನರ್ ಸ್ಥಾಪಿಸಲು ಸೂಚಿಸಲಾಗಿರುತ್ತದೆ. |
| ಆ | ಸರ್ಕಾರಿ ರಿಯಾಯಿತಿ ಸೌಲಭ್ಯಗಳಿಗೆ ಬಿಪಿಎಲ್ ಪಡಿತರ ಚೀಟಿ ಮಾನದಂಡವಾಗಿರುವ ಕಾರಣ | ಈ ಬಗ್ಗೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ |

| | | |
|---|---|---|
| | ಅನೇಕರು ಪಡಿತರ ಅಗತ್ಯವಿಲ್ಲದಿದ್ದರೂ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದು, ಸರ್ಕಾರಿ ಸೌಲಭ್ಯಗಳಿಗೆ ಅರ್ಹತಾ ದಾಖಲೆ ಪಟ್ಟಿಯಿಂದ ಪಡಿತರ ಚೀಟಿಯನ್ನು ಹೊರಗಿಡಲು ಸರ್ಕಾರ ಏನು ಕ್ರಮ ವಹಿಸುತ್ತದೆ; | ಪಡಿತರ ಚೀಟಿಯನ್ನು ಸರ್ಕಾರಿ ಸೌಲಭ್ಯಗಳಿಗೆ ಅರ್ಹತಾ ದಾಖಲೆ ಪಟ್ಟಿಯಿಂದ ಹೊರಗಿಡುವ ಬಗ್ಗೆ ಪರಿಶೀಲಿಸಿ, ಶಿಫಾರಸ್ಸು ಮಾಡಲು ಸರ್ಕಾರದ ಆದೇಶ ಹೊರಡಿಸಲಾಗಿದೆ. ಸಮಿತಿ ಪ್ರಕ್ರಿಯೆ ಪ್ರಾರಂಭಿಸಿದ್ದು, ಸಮಿತಿಯ ವರದಿ ಸ್ವೀಕೃತವಾದ ನಂತರ ಪಡಿತರ ಚೀಟಿಯನ್ನು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅರ್ಹತಾ ಮಾನದಂಡದ ಬಗ್ಗೆ ಕ್ರಮ ವಹಿಸಲಾಗುವುದು. |
| ಇ | ಪಡಿತರ ಸಾಮಾಗ್ರಿಗಳನ್ನು ಸ್ವಬಳಕೆ ಮಾಡದೆ ಪಡಿತರ ವ್ಯವಸ್ಥೆಯನ್ನು ದುರುಪಯೋಗಪಡಿಸುತ್ತಿರುವ ಬಗ್ಗೆ ಇಲಾಖೆ ಏನು ಕ್ರಮ ವಹಿಸುತ್ತದೆ; ಈ ಹಿನ್ನೆಲೆಯಲ್ಲಿ ಅನಗತ್ಯ ಹಾಗೂ ಗಂಭೀರತೆಯಿಲ್ಲದ (ನಾನ್ ಸೀರಿಯಸ್) ಬಿಪಿಎಲ್ ಪಡಿತರ ಚೀಟಿ ಅರ್ಜಿಗಳ ಸಂಖ್ಯೆ ಹೆಚ್ಚಾಗಿ ಒಟ್ಟು ಅರ್ಜಿ ವಿಲೇವಾರಿ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ನೈಜ ಅರ್ಹ ಬಿಪಿಎಲ್ ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗುತ್ತಿರುವ ಸಮಸ್ಯೆಯನ್ನು ಹೇಗೆ ನಿವಾರಿಸಲಾಗುತ್ತದೆ? | ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ಇಲಾಖಾ ವತಿಯಿಂದ ನಡೆಯುತ್ತದೆ.<br><br>ಪಡಿತರ ಚೀಟಿದಾರರು ಆಹಾರ-ಧಾನ್ಯಗಳನ್ನು ಪಡೆಯುವಾಗ ಅವರ ಬಯೋಮೆಟ್ರಿಕ್‌ನ್ನು ಪಡೆದು ಆಹಾರ-ಧಾನ್ಯ ಪಡೆಯಬೇಕಾಗಿರುತ್ತದೆ. ಇದರಿಂದಾಗಿ ಇತರರ ಪಡಿತರ ಸಾಮಗ್ರಿಯನ್ನು ಪಡೆಯುವುದನ್ನು ತಡೆಯಲು ಸಾಧ್ಯವಾಗಿರುತ್ತದೆ. ಅಲ್ಲದೆ ಇಲಾಖೆಯು 'ಕುಟುಂಬ' ತಂತ್ರಾಂಶದಿಂದ ಆದಾಯ ತೆರಿಗೆ ಪಾವತಿದಾರರು ವಾರ್ಷಿಕ ರೂ. 1.20 ಲಕ್ಷಕ್ಕಿಂತ ಹೆಚ್ಚಿರುವ ಫಲಾನುಭವಿಗಳು, ಸರ್ಕಾರಿ ನೌಕರರು, ಮೃತ ಫಲಾನುಭವಿಗಳು ಮತ್ತು 06 ತಿಂಗಳಿನಿಂದ ಪಡಿತರವನ್ನು ಪಡೆಯದೇ ಇರುವ ಆದ್ಯತಾ ಪಡಿತರ ಚೀಟಿದಾರರ ಮಾಹಿತಿಯನ್ನು ಪಡೆಯಲಾಗಿರುತ್ತದೆ. ಸದರಿ ಪಡಿತರ ಚೀಟಿಗಳನ್ನು ಪರಿಶೀಲಿಸಿ ಆದ್ಯತೇತರ (ಎಪಿಎಲ್) ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮ ವಹಿಸಲಾಗುತ್ತಿದೆ. |

ಆನಾಸ 397 ಡಿಆರ್ಎ 2024 (ಇ-ಆಫೀಸ್)

**(ಕೆ.ಹೆಚ್. ಮುನಿಯಪ್ಪ)**
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು